**1** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ **75/2023**

| | | |
|---|---|---|
| ಸಾಕ್ಷಿದಾರರ ಹೆಸರು | - ಮುಜಿಬುಲ್ ರೆಹಮಾನ್ | ಪಿಡಬ್ಲೂ - 09 |
| ತಂದೆಯ ಹೆಸರು | - ಡಿ. ಎಂ. ಅನ್ವರ್ | ಸಿಡಬ್ಲೂ - 23 |
| ವಯಸ್ಸು | - 32 ವರ್ಷ | |
| ಉದ್ಯೋಗ | - ಪೇದೆ 340, ವೃತ್ತ ಕಛೇರಿ, ಎನ್.ಆರ್. ಪುರ | |
| ವಾಸ ಸ್ಥಳ | - ಎನ್.ಆರ್. ಪುರ | |

*(*ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.*)*

ದಿನಾಂಕಃ 24-01-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. 2020 ನೇ ಇಸವಿಯಿಂದ ನಾನು ಎನ್.ಆರ್. ಪುರ ವೃತ್ತ ಕಛೇರಿಯಲ್ಲಿ ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

2. ಬಾಳೆಹೊನ್ನೂರು ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ: 30/2023 ಪ್ರಕರಣಕ್ಕೆ ಸಂಬಂಧಿಸಿದಂತೆ ಸದರಿ ಪ್ರಕರಣದ ತನಿಖಾ ಕಾಲದಲ್ಲಿ ದಿಃ 11-03-2023 ರಂದು ಕೃತ್ಯ ನಡೆದ ಸ್ಥಳದಲ್ಲಿ ಜರುಗಿಸಲಾದ ಸ್ಥಳ ಮತ್ತು ಅಮಾನತು ಪಂಚನಾಮೆ ಮತ್ತು ಅದೇ ದಿನ ಮಂಗಳೂರು ವೆನಲಾಕ್ ಆಸ್ಪತ್ರೆಯ ಶವಗಾರದಲ್ಲಿ ಜರುಗಿಸಲಾದ ಮೃತನ ಶವ ಪಂಚನಾಮೆಯ ಕಾಲದಲ್ಲಿ ತನಿಖಾಧಿಕಾರಿಗಳಾದ ಚಾಸಾ.25 ರವರ ಆದೇಶದ ಮೇರೆಗೆ ನನ್ನ ರೆಡಮೀ ಕಂಪನಿಗೆ ಸೇರಿದ ಮೊಬೈಲ್ ನಲ್ಲಿ ಫೋಟೋಗಳನ್ನು ತೆಗೆದಿದ್ದೇನೆ.

3. ನಂತರ ದಿಃ 21-03-2023 ರಂದು ಚಾಸಾ.25 ರವರು ಆರೋಪಿಯು ತೋರಿಸಿದಂತೆ ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿದ ಸಮಯದಲ್ಲಿ ತನಿಖಾಧಿಕಾರಿಗಳ ಸೂಚನೆಯ ಮೇರೆಗೆ ಮೇಲೆ ಹೇಳಿದ ನನ್ನ ರೆಡಮೀ ಕಂಪನಿಗೆ ಸೇರಿದ ಮೊಬೈಲ್ ನಲ್ಲಿ ಫೋಟೋಗಳನ್ನು ತೆಗೆದು ವಿಡಿಯೋ ಚಿತ್ರಿಕರಿಸಿದ್ದೇನೆ. ನಂತರ ಆರೋಪಿಯಿಂದ ಆತ ಕೃತ್ಯವೆಸಗಿದ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ತನಿಖಾಧಿಕಾರಿಗಳು ಅಮಾನತು ಪಡಿಸಿಕೊಂಡಿದ್ದು ಆ ಸಮಯದಲ್ಲಿ ಅವರ ಆದೇಶದ ಮೇರೆಗೆ ನನ್ನ ರೆಡಮೀ ಕಂಪನಿಗೆ ಸೇರಿದ ಮೊಬೈಲ್ ನಲ್ಲಿ ಫೋಟೋಗಳನ್ನು ತೆಗೆದಿದ್ದೇನೆ.

4. ನಂತರ ಚಾಸಾ.25 ರವರ ಸೂಚನೆಯಂತೆ ಮೇಲೆ ಹೇಳಿದ ಎಲ್ಲಾ ಫೋಟೋಗಳನ್ನು ಮತ್ತು ವಿಡಿಯೋವನ್ನು

ಯಥಾಸ್ಥಿತಿಯಲ್ಲಿ ಎನ್.ಆರ್.ಪುರ ವೃತ್ತ ನಿರೀಕ್ಷಕರ ಕಛೇರಿಗೆ ಒದಗಿಸಲಾಗಿದ್ದ N.R.P.3 ADMIN ಎಂಬ ಹೆಚ್.ಪಿ. ಕಂಪನಿಯ ಕಂಪ್ಯೂಟರಿಗೆ ಡೇಟಾ ಕೇಬಲ್ ಮುಖಾಂತರ ವರ್ಗಾಯಿಸಿ ನಂತರ ಅವುಗಳನ್ನು ಒಂದು ಖಾಲಿ ಸಿಡಿಗೆ ಯಥಾಸ್ಥಿತಿಯಲ್ಲಿ ವರ್ಗಾಯಿಸಿರುತ್ತೇನೆ. ಸದರಿ ಫೋಟೋಗಳನ್ನು ಎನ್.ಆರ್.ಪುರದಲ್ಲಿರುವ ಸರ್ಲಿ ಫೋಟೋ ಸ್ಟುಡಿಯೋದವರಿಗೆ ಕೊಟ್ಟು ಅವರಿಂದ ಅವುಗಳನ್ನು ಪ್ರಿಂಟ್ ಹಾಕಿಸಿರುತ್ತೇನೆ. ಸದರಿ ಫೋಟೋಗಳನ್ನು ತೆಗೆಯುವ ಸಮಯದಲ್ಲಿ ನನ್ನ ಮೊಬೈಲ್ ಸುಸ್ಥಿತಿಯಲ್ಲಿ ಇತ್ತು ಮತ್ತು ಅವುಗಳನ್ನು ಮೇಲೆ ಹೇಳಿದಂತೆ ವರ್ಗಾಯಿಸಿದ ಕಂಪ್ಯೂಟರ್ ಸಹ ಸುಸ್ಥಿತಿಯಲ್ಲಿ ಇತ್ತು.

5. ನಂತರ ಆ ಬಗ್ಗೆ ದಿನಾಂಕ 05-05-2023 ರಂದು ನಾನು ಚಾಸಾ.25 ರವರಿಗೆ ಭಾರತೀಯ ಸಾಕ್ಷ್ಯ ಅಧಿನಿಯಮ 65 ಬಿ ರಡಿಯಲ್ಲಿ ದೃಢೀಕರಣ ಪತ್ರವನ್ನು ಮತ್ತು ಮೇಲೆ ಹೇಳಿದಂತೆ ಫೋಟೋ ಮತ್ತು ವಿಡಿಯೋವನ್ನು ವರ್ಗಾಯಿಸಿದ ಸಿಡಿಯನ್ನು ನೀಡಿರುತ್ತೇನೆ. ಸದರಿ ಸಿಡಿ ಮತ್ತು ದೃಢೀಕರಣ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಸಿಡಿಯನ್ನು ಮತ್ತು ದೃಢೀಕರಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಕ್ರಮವಾಗಿ ನಿಪಿ.41 ಮತ್ತು ಪಿ.42 ಎಂದು ಗುರುತಿಸಲಾಯಿತು. ನಿಪಿ.42 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.42(ಎ) ಎಂದು ಗುರುತಿಸಲಾಯಿತು. ಕಣ್ತಪ್ಪಿನಿಂದಾಗಿ ಸದರಿ ದೃಢೀಕರಣ ಪತ್ರವನ್ನು ನೀಡಿದ ದಿನಾಂಕವನ್ನು 05-05-2023 ರ ಬದಲಿಗೆ 05-05-2022 ಎಂದು ಟೈಪ್

ಮಾಡಿದ್ದೇನೆ.

6. ನನಗೆ ಫೋಟೋಗಳನ್ನು ತೆಗೆಯುವ ಬಗ್ಗೆ ಮತ್ತು ಅವುಗಳನ್ನು ಕಂಪ್ಯೂಟರಿಗೆ ವರ್ಗಾಯಿಸುವ ಬಗ್ಗೆ ಮತ್ತು ಕಂಪ್ಯೂಟರಿನಿಂದ ಸಿಡಿಗೆ ವರ್ಗಾಯಿಸುವ ಬಗ್ಗೆ ಪರಿಣಿತಿ ಇರುತ್ತದೆ. ಇಲಾಖಾ ವತಿಯಿಂದ ನನಗೆ ಕಂಪ್ಯೂಟರ್ ಬಗ್ಗೆ ತರಬೇತಿಯನ್ನು ನೀಡಲಾಗಿರುತ್ತದೆ ಮತ್ತು ನಾನು ಕಂಪ್ಯೂಟರ್ ಲಿಟರೆಸಿ ಟೆಸ್ಟ್‌ನಲ್ಲಿ ತೇರ್ಗಡೆ ಹೊಂದಿರುತ್ತೇನೆ.

7. ನಾನು ಮೇಲೆ ಹೇಳಿದಂತೆ ನನ್ನ ಮೊಬೈಲಿನಿಂದ ತೆಗೆದಿದ್ದ ಮತ್ತು ಸಿಡಿಗೆ ವರ್ಗಾಯಿಸಿದ್ದ ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ನಿಪಿ.3 ರಿಂದ ಪಿ.17, ಪಿ.22, ಪಿ.23, ಪಿ.25 ರಿಂದ ಪಿ.28 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಹೆಚ್.ಎಂ.ಎಸ್ ವಕೀಲರಿಂದಃ</u>

(ಈ ಹಂತದಲ್ಲಿ ವಿಡಿಯೋ ಕಾನ್ಫರೇನ್ಸಿಂಗ್ ಮುಖಾಂತರ ಹಾಜರುಪಡಿಸಿರುವ ಆರೋಪಿಯನ್ನು ಕುರಿತು ಧ್ವನಿ ಕೇಳಿಸುತ್ತಿದೆಯೇ ಎಂದು ಕೇಳಿ, ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು).

8. ಕೃತ್ಯ ನಡೆದ ಸ್ಥಳದಲ್ಲಿ ಫೋಟೋಗಳನ್ನು ತೆಗೆದಿದ್ದಾಗಿ ಹೇಳಿದ್ದೀರಿ ಆಗ ಸಮಯ ಎಷ್ಟಾಗಿತ್ತು ಎಂದರೆ ಸಾಕ್ಷಿ ಅಂದಾಜು ಬೆಳಿಗ್ಗೆ 8 ರಿಂದ 9.30 ಗಂಟೆ ಎನ್ನುತ್ತಾರೆ. ಆರೋಪಿಯಿಂದ ತನಿಖಾಧಿಕಾರಿಗಳು ಬಟ್ಟೆಯನ್ನು ಅಮಾನತುಪಡಿಸಿಕೊಂಡ

ಸಮಯದಲ್ಲಿ ಫೋಟೋಗಳನ್ನು ತೆಗೆದಿದ್ದಾಗಿ ಹೇಳಿದ್ದೀರಿ ಆಗ ಸಮಯ ಎಷ್ಟಾಗಿತ್ತು ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಆ ಸಮಯದಲ್ಲಿ ತನಿಖಾಧಿಕಾರಿಗಳು ಮಹಜರ್ ಜರುಗಿಸಿದ್ದಾರೆ. ಆಗ ಸಮಯ ಎಷ್ಟಾಗಿತ್ತು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ.

9. ಫೋಟೋಗಳನ್ನು ತಗೆಯುವ ಬಗ್ಗೆ ಮತ್ತು ಅವುಗಳನ್ನು ಕಂಪ್ಯೂಟರಿಗೆ ಅಥವಾ ಸಿಡಿಗೆ ವರ್ಗಾಯಿಸುವ ಬಗ್ಗೆ ನೀವು ವಿಶೇಷ ತರಬೇತಿಯನ್ನು ಪಡೆದಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ಬಗ್ಗೆ ನೀವು ತನಿಖಾಧಿಕಾರಿಗಳಿಗೆ ದೃಢೀಕರಣ ಪತ್ರವನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲಾಖೆಯಿಂದ ಆ ಬಗ್ಗೆ ತರಬೇತಿಯನ್ನು ನೀಡಲಾಗುತ್ತದೆ ಆದರೆ ದೃಢೀಕರಣ ಪತ್ರವನ್ನು ಕೊಡುವುದಿಲ್ಲ ಎನ್ನುತ್ತಾರೆ.

10. ನಾನು ತನಿಖಾಧಿಕಾರಿಗಳ ಸೂಚನೆಯ ಮೇರೆಗೆ ಫೋಟೋಗಳನ್ನು ತೆಗೆದುಕೊಂಡಿದ್ದೇನೆ ಆದರೆ ಅವರು ಮಾಡಿದ ಬರವಣಿಗೆ ಯಾರೆಲ್ಲಾ ಸಹಿ ಮಾಡಿದರು ಎಂದು ನನಗೆ ಗೊತ್ತಿಲ್ಲ.

11. ದಿಃ 11-03-2023 ರಂದು ಮಧ್ಯಾಹ್ನ 1.30 ರಿಂದ 3.30 ಗಂಟೆಯವರೆಗೆ ಮಂಗಳೂರಿನ ವೆನಲಾಕ್ ಆಸ್ಪತ್ರೆಯ ಶವಗಾರದಲ್ಲಿ ಶವ ಪಂಚನಾಮೆಯನ್ನು ಜರುಗಿಸಲಾಗಿದೆ. ಅದೇ ಅವಧಿಯಲ್ಲಿ ನಾನು ತನಿಖಾಧಿಕಾರಿಗಳ ಸೂಚನೆಯ ಮೇರೆಗೆ ಫೋಟೋಗಳನ್ನು ತೆಗೆದುಕೊಂಡಿದ್ದೇನೆ. ನೀವು ಆ ಸಮಯದಲ್ಲಿ ಸದರಿ ಆಸ್ಪತ್ರೆಗೆ ಭೇಟಿ ನೀಡಿದ್ದಾಗಿ, ಅಲ್ಲಿ

ತನಿಖಾಧಿಕಾರಿಗಳ ಸೂಚನೆಯ ಮೇರೆಗೆ ಫೋಟೋಗಳನ್ನು ತೆಗೆದಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

12. ಕೃತ್ಯ ನಡೆದ ಸ್ಥಳಕ್ಕೆ ಹೋಗಿದ್ದಾಗಿ, ಅಲ್ಲಿ ತನಿಖಾಧಿಕಾರಿಗಳ ಸೂಚನೆಯ ಮೇರೆಗೆ ಫೋಟೋಗಳನ್ನು ತೆಗೆದಿದ್ದಾಗಿ ಮತ್ತು ಆರೋಪಿಯ ಬಟ್ಟೆಗಳನ್ನು ತನಿಖಾಧಿಕಾರಿಗಳು ವಶಪಡಿಸಿಕೊಂಡಿದ್ದಾಗಿ ಆ ಸಮಯದಲ್ಲಿ ನೀವು ಅವರ ಸೂಚನೆಯ ಮೇರೆಗೆ ಫೋಟೋಗಳನ್ನು ತೆಗೆದಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಮಗೆ ಫೋಟೋಗಳನ್ನು ತೆಗೆಯಲು ಮತ್ತು ಅವುಗಳನ್ನು ವರ್ಗಾಯಿಸಲು ಯಾವುದೇ ತರಬೇತಿ ಮತ್ತು ಅನುಭವ ಇಲ್ಲ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಯಾವುದೇ ಕರ್ತವ್ಯ ನಿರ್ವಹಿಸದಿದ್ದರೂ ಸಹ ಮೇಲಾಧಿಕಾರಿಗಳ ಮಾತನ್ನು ಕೇಳಿ ನಿಪಿ.41 ಮತ್ತು 42 ರಂತೆ ಸುಳ್ಳು ದಾಖಲೆಗಳನ್ನು ನೀಡಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ